

بسم اللهِ الرّحمٰن الرّحيم

# ಹಝ್‌ರತ್ ಪೈಗಂಬರ್(ಸ)ರಿಗೆ ಅಲ್ಲಾಹನೊಡನೆ ಇದ್ದ ಅತುಲ್ಯ ಪ್ರೇಮ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **30–01–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್‌ರತ್ ಮುಹಮ್ಮದ್ ಪೈಗಂಬರ್(ಸ)ರಿಗೆ ಅಲ್ಲಾಹನ ಮೇಲಿದ್ದ ಪ್ರೀತಿಯ ಅಸಂಖ್ಯಾತ ಘಟನೆಗಳಿವೆ. ವಾಸ್ತವದಲ್ಲಿ, ಅವರ ಪ್ರತಿಯೊಂದು ಕಾರ್ಯ ಮತ್ತು ಪ್ರತಿಯೊಂದು ಘಟನೆಯಿಂದ ಅವರ ಹೃದಯದಲ್ಲಿ ಸದಾ ದೈವಿಕ ಪ್ರೇಮದ ಸಾಗರವೇ ಉಕ್ಕಿ ಹರಿಯುತ್ತಿತ್ತು ಎಂದು ವ್ಯಕ್ತವಾಗುತ್ತದೆ. ಇದರ ಒಂದು ದೃಶ್ಯವು ಉಹುದ್ ಯುದ್ಧದಲ್ಲಿ ಕಂಡುಬರುತ್ತದೆ. ಅಲ್ಲಿ ದೈವಿಕ ಪ್ರೇಮದಲ್ಲಿ ಅವರ ತಳಮಳದ ಒಂದು ವಿಸ್ಮಯಕರ ಮತ್ತು ವಿಶಿಷ್ಟ ಮಾದರಿ ಕಾಣಬಹುದಾಗಿತ್ತು.

ಹಝ್‌ರತ್ ಬರಾಅ(ರ) ವಿವರಿಸುತ್ತಾರೆ: 'ಉಹುದ್ ದಿನದಂದು ನಾವು ಮುಶ್ರಿಕರನ್ನು ಎದುರಿಸಿದೆವು. ನಬಿ ಕರೀಮ್(ಸ) ಬಿಲ್ಲುಗಾರರ ಒಂದು ತಂಡವನ್ನು ರಚಿಸಿ ಹಝ್‌ರತ್ ಅಬ್ದುಲ್ಲಾ(ರ)ರನ್ನು ಅದರ ನಾಯಕರನ್ನಾಗಿ ಮಾಡಿದರು. ಅವರಿಗೆ ಹೀಗೆ ನಿರ್ದೇಶನ ನೀಡಿದರು: 'ನಾವು ಶತ್ರುಗಳ ಮೇಲೆ ವಿಜಯ ಸಾಧಿಸಿದ್ದೇವೆ ಎಂದು ನೀವು ನೋಡಿದರೂ ನಿಮ್ಮ ಜಾಗದಿಂದ ಕದಲಬೇಡಿ. ಅದೇ ರೀತಿಯಲ್ಲಿ ಶತ್ರುಗಳು ನಮ್ಮ ಮೇಲೆ ಮೇಲುಗೈ ಸಾಧಿಸಿದ್ದಾರೆ ಎಂದು ಕಂಡರೂ ನಮ್ಮ ಸಹಾಯಕ್ಕೆ ಬರಬೇಡಿ.' ಅಂದರೆ ವಿಜಯ ಅಥವಾ ಸೋಲು ಎರಡೂ ಸಂದರ್ಭಗಳಲ್ಲಿಯೂ ನೀವು ನಿಮ್ಮ ಜಾಗವನ್ನು ಬಿಡಬಾರದು.

ವರದಿಗಾರ ಹೇಳುತ್ತಾರೆ: ಯುದ್ಧ ನಡೆದಾಗ ಶತ್ರುಗಳು ಸೋತು ಓಡಿಹೋದರು. ಎಷ್ಟರಮಟ್ಟಿಗೆ ಎಂದರೆ ಮುಶ್ರಿಕ್ ಮಹಿಳೆಯರು ಬೆಟ್ಟಗಳ ಕಡೆಗೆ ಓಡುವುದನ್ನು ನಾನು ಕಂಡೆನು. ಮುಸ್ಲಿಮರು 'ಯುದ್ಧ ಸಂಪತ್ತು, ಯುದ್ಧ ಸಂಪತ್ತು' ಎಂದು ಹೇಳಲು ಪ್ರಾರಂಭಿಸಿದರು. ಅವರನ್ನು ಹಝ್‌ರತ್ ಅಬ್ದುಲ್ಲಾಹ್(ರ) ತಡೆದರು ಮತ್ತು ನೀವು ನಿಮ್ಮ ಜಾಗದಿಂದ ಕದಲಬಾರದು ಎಂದು ಪ್ರವಾದಿ(ಸ) ಆದೇಶಿಸಿದ್ದರು ಎಂದು ಹೇಳಿದರು. ಆದರೆ ಮುಸ್ಲಿಮರು ಕಣಿವೆಯನ್ನು ಬಿಟ್ಟು ಸಂಪತ್ತಿನ ಕಡೆಗೆ ಬಂದಾಗ, ಅಲ್ಲಾಹನು ಸಹ ಆ ಮುಸ್ಲಿಮರಿಂದ ಮುಖ ತಿರುಗಿಸಿದನು. ಹೀಗೆ ಯುದ್ಧದ ಗತಿ ಬದಲಾಯಿತು. ಶತ್ರುಗಳು ಪುನಃ ದಾಳಿ ಮಾಡಿದರು. ಇದರಿಂದ 70 ಮುಸ್ಲಿಮರು ಹುತಾತ್ಮರಾದರು.

ವರದಿಗಾರ ಹೇಳುತ್ತಾರೆ: ಆ ವೇಳೆ ಹಝ್‌ರತ್ ಪೈಗಂಬರ್(ಸ) ತಮ್ಮ ಸಂಗಡಿಗರೊಂದಿಗೆ ಬೆಟ್ಟದ ತಪ್ಪಲಿನಲ್ಲಿ ಆಶ್ರಯ ಪಡೆದಿದ್ದರು. ಆಗ ಅಬೂಸುಫ್‌ಯಾನ್ ಎತ್ತರದ ಸ್ಥಳವೇರಿ ಹೀಗೆ ಕೂಗಿ ಕೇಳಿದರು: 'ನಿಮ್ಮಲ್ಲಿ ಮುಹಮ್ಮದ್(ಸ) ಇದ್ದಾರೆಯೇ?' ಉತ್ತರ ನೀಡಬೇಡಿ ಎಂದು ಹಝ್‌ರತ್ ಪೈಗಂಬರ್(ಸ) ಹೇಳಿದರು. ಅನಂತರ 'ನಿಮ್ಮಲ್ಲಿ ಇಬ್ನ್ ಅಬೀ ಕುಹಾಫ (ಹಝ್‌ರತ್ ಅಬೂಬಕರ್) ಇದ್ದಾರೆಯೇ?' ಎಂದು ಅಬೂಸುಫ್‌ಯಾನ್ ಕೇಳಿದರು. ಅದಕ್ಕೂ ಉತ್ತರ ನೀಡಬೇಡಿ ಎಂದು ಹಝ್‌ರತ್ ಪೈಗಂಬರ್(ಸ) ಹೇಳಿದರು. ಅನಂತರ 'ನಿಮ್ಮಲ್ಲಿ ಉಮರ್ ಬಿನ್ ಖತ್ತಾಬ್ ಇದ್ದಾರೆಯೇ?' ಎಂದು ಅಬೂಸುಫ್‌ಯಾನ್ ಕೇಳಿದರು. ಯಾವುದೇ ಉತ್ತರ ಬರದಿದ್ದಾಗ 'ಇವರೆಲ್ಲರೂ ಕೊಲ್ಲಲ್ಪಟ್ಟಿದ್ದಾರೆ, ಬದುಕಿದ್ದರೆ ಖಂಡಿತ ಉತ್ತರಿಸುತ್ತಿದ್ದರು' ಎಂದು ಅಬೂಸುಫ್‌ಯಾನ್ ಹೇಳಿದರು.

ಇದನ್ನು ಕೇಳಿ ಹಝ್‌ರತ್ ಉಮರ್(ರ)ರಿಗೆ ತಮ್ಮನ್ನು ತಾವು ತಡೆದುಕೊಳ್ಳಲಾಗಲಿಲ್ಲ. ಅವರು ಕೂಗಿ ಹೇಳಿದರು: 'ಎಲೈ ಅಲ್ಲಾಹನ ಶತ್ರು, ನಿನ್ನ ಮಾತು ಸುಳ್ಳು. ನಿನ್ನನ್ನು ಅವಮಾನಿಸಲು ಅಲ್ಲಾಹನು ಇವರೆಲ್ಲರನ್ನೂ ಜೀವಂತವಾಗಿರಿಸಿದ್ದಾನೆ.' ಅನಂತರ ಅಬೂ ಸುಫ್‌ಯಾನ್, 'ಹುಬಲ್ ವಿಗ್ರಹಕ್ಕೆ ಜಯವಾಗಲಿ' ಎಂದು ಘೋಷಣೆ ಕೂಗಿದರು. ಇದನ್ನು ಕೇಳಿದಾಗ ಹಝ್‌ರತ್ ಪೈಗಂಬರ್(ಸ) ಅಸಮಾಧಾನಗೊಂಡು ನೀವು ಇದಕ್ಕೆ ಉತ್ತರ ನೀಡಿ ಎಂದು ಹೇಳಿದರು. 'ನಾವು ಏನು ಉತ್ತರ ನೀಡಲಿ?' ಎಂದು ಸಹಾಬಿಯರು ಕೇಳಿದರು. ಆಗ ಹಝ್‌ರತ್ ಪೈಗಂಬರ್(ಸ) ಹೇಳಿದರು: 'ಅಲ್ಲಾಹನು ಅತ್ಯಂತ ಶ್ರೇಷ್ಠನೂ ಅತ್ಯಂತ ಮಹೋನ್ನತನೂ ಆಗಿದ್ದಾನೆ ಎಂದು ಹೇಳಿರಿ.' ಅಬೂ ಸುಫ್‌ಯಾನ್ ಹೇಳಿದನು: 'ನಮಗೆ ಉಝ್ಝಾ ವಿಗ್ರಹ ಇದೆ, ನಿಮಗೆ ಉಝ್ಝಾ ಇಲ್ಲ'. ನೀವು ಅದಕ್ಕೆ ಉತ್ತರ ನೀಡಿ ಎಂದು ಹಝ್‌ರತ್ ಪೈಗಂಬರ್(ಸ) ಹೇಳಿದರು. 'ಏನು ಹೇಳಲಿ?' ಎಂದು ಸಹಾಬಿಯರು ಕೇಳಿದರು. ಪೈಗಂಬರ್(ಸ) ಹೇಳಿದರು: 'ಅಲ್ಲಾಹನು ನಮ್ಮ ಸಹಾಯಕ ಆಗಿದ್ದಾನೆ ಮತ್ತು ನಿಮಗೆ ಯಾವ ಸಹಾಯಕನೂ ಇಲ್ಲ ಎಂದು ಹೇಳಿರಿ.'

(ಹುಝೂರ್ ಹೇಳಿದರು:) ಅಲ್ಲಾಹನ ಪ್ರೀತಿಯಲ್ಲಿ ಶಿರ್ಕಿನ ಯಾವುದೇ ಅಂಶವನ್ನು ಕೂಡ ಬರದಂತೆ ಹಝ್‌ರತ್ ಪೈಗಂಬರ್(ಸ) ಗಮನವಹಿಸುತ್ತಿದ್ದರು. ಜನರು ಸಮಾಧಿಗಳನ್ನು ಪೂಜಿಸುವ ಸ್ಥಳವನ್ನಾಗಿ ಮಾಡಿಕೊಳ್ಳಬಹುದು ಎಂಬ ಚಿಂತೆ ಹಝ್‌ರತ್ ಪೈಗಂಬರ್(ಸ)ರಿಗೆ ಇರುತ್ತಿತ್ತು. ಆದರೆ ದೌರ್ಭಾಗ್ಯದಿಂದ ಇಂದು ಇದೇ ನಡೆಯುತ್ತಿದೆ. ಮುಸ್ಲಿಮರು ಪೀರ್ ಮತ್ತು ಫಕೀರರ ಸಮಾಧಿಗಳಿಗೆ ಹೋಗಿ ಪೂಜಿಸುತ್ತಾರೆ, ಸಜ್ದ ಮಾಡುತ್ತಾರೆ.'

ಹಝ್ರತ್ ಆಯಿಶ(ರ) ವಿವರಿಸುತ್ತಾರೆ: ಹಝ್ರತ್ ಪೈಗಂಬರ್(ಸ) ತಮ್ಮ ಮರಣಶಯ್ಯೆಯಲ್ಲಿರುವಾಗ, ಅಂದರೆ ಜೀವಿತದ ಕೊನೆಯ ಗಳಿಗೆಯಲ್ಲಿ ಹೀಗೆ ಹೇಳಿದರು: 'ಯಹೂದಿಯರು ಮತ್ತು ಕ್ರೈಸ್ತರ ಮೇಲೆ ಅಲ್ಲಾಹನ ಶಾಪವಿರಲಿ, ಅವರು ತಮ್ಮ ಪ್ರವಾದಿಗಳ ಸಮಾಧಿಗಳನ್ನು ಮಸೀದಿಗಳನ್ನಾಗಿ (ಪೂಜಾ ಸ್ಥಳಗಳನ್ನಾಗಿ) ಮಾಡಿಕೊಂಡರು.' ಹಝ್ರತ್ ಆಯಿಶ(ರ) ಹೇಳುತ್ತಾರೆ: 'ಒಂದು ವೇಳೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿರದಿದ್ದರೆ, ಅವರ ಸಮಾಧಿಯನ್ನು ತೆರೆದ ಸ್ಥಳದಲ್ಲಿ ಇಡಲಾಗುತ್ತಿತ್ತು. ಆದರೆ ಅದು ಪೂಜಾ ಸ್ಥಳವಾಗಬಹುದು ಎಂಬ ಭಯ ನನಗಿತ್ತು, ಅದಕ್ಕಾಗಿಯೇ ಅದನ್ನು ತೆರೆದ ಸ್ಥಳದಲ್ಲಿ ಇಡಲಾಗಿಲ್ಲ.' (ಹುಝೂರ್ ಹೇಳಿದರು:) 'ಇತ್ತೀಚಿನ ದಿನಗಳಲ್ಲಿ ಅಲ್ಲಿನ ಸರ್ಕಾರವು ಅದರ ಸುತ್ತಲೂ ವ್ಯವಸ್ಥಿತ ಏರ್ಪಾಡು ಮಾಡಿದೆ. ಯಾವುದೇ ರೀತಿಯ ಶಿರ್ಕ್ ಉಂಟಾಗದಿರಲಿಕ್ಕಾಗಿ ಕಟಕಟೆಗಳು ಮತ್ತು ಗೋಡೆಗಳನ್ನು ನಿರ್ಮಿಸಿದೆ, ಕನಿಷ್ಠ ಈ ಒಳ್ಳೆಯ ಕೆಲಸವನ್ನಾದರೂ ಅವರು ಮಾಡಿದ್ದಾರೆ.'

(ಹುಝೂರ್ ಹೇಳಿದರು:) ಅಲ್ಲಾಹನ ಏಕತ್ವದ ಬಗ್ಗೆ ಒಂದು ವರದಿ ಇದೆ. ಹಝ್ರತ್ ಉಬಯ್ ಬಿನ್ ಕಅ್‌ಬ್(ರ)ರಿಂದ ಹೀಗೆ ವರದಿಯಾಗಿದೆ: 'ನೀವು ನಿಮ್ಮ ದೇವನ ವಂಶಾವಳಿಯನ್ನು ನಮಗೆ ತಿಳಿಸಿ' ಎಂದು ಮುಶ್ರಿಕರು ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿದರು. ಆಗ ಅಲ್ಲಾಹನು ಈ ವಚನವನ್ನು ಅವತೀರ್ಣಗೊಳಿಸಿದನು: **'ಖುಲ್ ಹುವಲ್ಲಾಹು ಅಹದ್. ಅಲ್ಲಾಹುಸ್ಸಮದ್...'** ಎಂದರೆ, ಹೇಳು: 'ಅವನು ಅಲ್ಲಾಹನು; ಏಕನು; ಅಲ್ಲಾಹನು ನಿರಪೇಕ್ಷನು. ಅವನು ಜನಕನಲ್ಲ; ಯಾರಿಂದಲೂ ಜನಿಸಿದವನೂ ಅಲ್ಲ. ಸೃಷ್ಟಿಯಾಗಿರುವುದೆಲ್ಲ ಸಾಯಲೇಬೇಕು ಮತ್ತು ಸಾಯುವವನಿಗೆ ವಾರಸುದಾರನಿರುತ್ತಾನೆ. ಆದರೆ ಅಲ್ಲಾಹನಿಗೆ ಮರಣವಿಲ್ಲ ಮತ್ತು ಅವನಿಗೆ ಯಾರೂ ವಾರಸುದಾರರಿಲ್ಲ.'

ಹಝ್ರತ್ ಝೈದ್ ಬಿನ್ ಖಾಲಿದ್(ರ) ವಿವರಿಸುತ್ತಾರೆ: ಹುದೈಬಿಯಾದಲ್ಲಿ ರಾತ್ರಿ ಮಳೆ ಬಂದ ನಂತರ ಹಝ್ರತ್ ಪೈಗಂಬರ್(ಸ) ನಮಗಾಗಿ ಬೆಳಗಿನ ನಮಾಝಿನ ಇಮಾಮತ್ ವಹಿಸಿದರು. ನಮಾಝ್ ಮುಗಿದ ನಂತರ ಹಝ್ರತ್ ಪೈಗಂಬರ್(ಸ) ಜನರ ಕಡೆಗೆ ತಿರುಗಿ ಹೀಗೆ ಕೇಳಿದರು: 'ನಿಮ್ಮ ಪ್ರಭು ಏನು ಹೇಳಿದನು ಎಂದು ನಿಮಗೆ ಗೊತ್ತೇ?'. ಜನರು ಹೇಳಿದರು: 'ಅಲ್ಲಾಹನು ಮತ್ತು ಅವನ ಪ್ರವಾದಿ ಹೆಚ್ಚು ಬಲ್ಲರು'. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: 'ಅಲ್ಲಾಹನು ಹೇಳುತ್ತಾನೆ: ನನ್ನ ದಾಸರಲ್ಲಿ ಕೆಲವರು ನನ್ನ ಮೇಲೆ ನಂಬಿಕೆ ಇಡುವವರಾಗಿ ಬೆಳಿಗ್ಗೆ ಎದ್ದರು, ಇನ್ನು ಕೆಲವರು ನಿರಾಕರಿಸುವವರಾಗಿ ಬೆಳಿಗ್ಗೆ ಎಚ್ಚರಗೊಂಡರು. ಅಂದರೆ, ರಾತ್ರಿ ಮಳೆ ಬಂದದ್ದನ್ನು ನೋಡಿ ಕೆಲವರು, ಅಲ್ಲಾಹನ ಅನುಗ್ರಹ ಮತ್ತು ಕರುಣೆಯಿಂದ ಮಳೆ ಸುರಿಯಿತು ಎಂದು ಹೇಳಿದರು; ಅವರು ನನ್ನ ಮೇಲೆ ವಿಶ್ವಾಸವಿಡುವವರಾಗಿದ್ದಾರೆ. ಇನ್ನು ಕೆಲವರು, ನಕ್ಷತ್ರದ ಕಾರಣದಿಂದ ಮಳೆ ಬಂತು ಎಂದು ಹೇಳಿದರು; ಅವರು ನನ್ನನ್ನು ನಿರಾಕರಿಸುವವರಾಗಿದ್ದಾರೆ.'

ಹಝ್ರತ್ ಮಹ್‌ಮೂದ್ ಬಿನ್ ಲಬೀದ್(ರ) ವರದಿ ಮಾಡುತ್ತಾರೆ: 'ರಸೂಲುಲ್ಲಾಹ್(ಸ) ಹೇಳಿದರು: 'ನನಗೆ ನಿಮ್ಮ ವಿಷಯದಲ್ಲಿ ಅತಿ ಹೆಚ್ಚು ಭಯವಿರುವುದು ಶಿರ್ಕೆ ಅಸ್‌ಗರ್ (ಚಿಕ್ಕ ಶಿರ್ಕ್) ಬಗ್ಗೆಯಾಗಿದೆ.' 'ಶಿರ್ಕೆ ಅಸ್‌ಗರ್ ಎಂದರೇನು?' ಎಂದು ಸಹಾಬಿಯರು ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: 'ಅದು **ರಿಯಾ** (ತೋರಿಕೆ) ಆಗಿದೆ.' ಆದ್ದರಿಂದ ನಾವು ನಮ್ಮ ಆತ್ಮಾವಲೋಕನ ಮಾಡಿಕೊಳ್ಳಬೇಕು. ಪರಲೋಕದಲ್ಲಿ ಅನ್ಯ ಮಾರ್ಗಗಳು ಕೆಲಸಕ್ಕೆ ಬರುವುದಿಲ್ಲ. ಅಲ್ಲಾಹನು ಇಷ್ಟಪಡುವುದು ರಸೂಲುಲ್ಲಾಹ್(ಸ)ರ ಅನುಸರಣೆಯನ್ನು ಮಾತ್ರವಾಗಿದೆ.'

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: 'ಹಝ್ರತ್ ಪೈಗಂಬರ್(ಸ)ರನ್ನು ನೋಡಿರಿ, ಅವರಿಗೆ ಎಂತಹ ಪರಿಜ್ಞಾನ ಮತ್ತು ಎಚ್ಚರಿಕೆ ಇತ್ತು! ಅವರು ಅಲ್ಲಾಹನಿಗೆ ಹೇಗೆ ಭಯಪಡುತ್ತಿದ್ದರು! ಅವರು ಎಲ್ಲ ಮನುಷ್ಯರಿಗಿಂತ ಪರಿಪೂರ್ಣರಾಗಿದ್ದರು ಮತ್ತು ಎಲ್ಲ ರೀತಿಯ ತಪ್ಪುಗಳಿಂದ ಮುಕ್ತರಾಗಿದ್ದರು. ಆದರೂ ಪರಿಶುದ್ಧತೆ ಮತ್ತು ಪಾವಿತ್ರ್ಯತೆಯ ಎಂತಹ ಸ್ಥಿತಿ ಆಗಿತ್ತು ಎಂದರೆ, ಅವರು ಸದಾ ಅಲ್ಲಾಹನಿಗೆ ಭಯಪಡುತ್ತಿದ್ದರು ಮತ್ತು ಯಾವಾಗಲೂ ಒಳಿತುಗಳನ್ನು ಮಾಡುತ್ತಾ ಹೋಗುತ್ತಿದ್ದರು. ಕೆಡುಕಿನ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ. ಅದರ ಒಂದಂಶ ಕೂಡ ಇರಲಿಲ್ಲ. ಸದಾ ಅಲ್ಲಾಹನ ಆರಾಧನೆಯಲ್ಲಿ ಮಗ್ನರಾಗಿರುತ್ತಿದ್ದರು. ಅಲ್ಲಾಹನಿಗೆ ತುಂಬಾ ಭಯಪಡುತ್ತಿದ್ದರು. ಅಲ್ಲಾಹನ ವೈಭವವನ್ನು ಕಾಣುವಾಗ ತಾನು ಮಾಡಿದ ಸತ್ಕರ್ಮಗಳನ್ನು ಲೆಕ್ಕಿಸದೇ ನಿರಪೇಕ್ಷನಾದ ಅಲ್ಲಾಹನ ಸನ್ನಿಧಿಯಲ್ಲಿ ಕ್ಷಮೆಯಾಚನೆ (ಇಸ್ತಿಗ್ಫಾರ್) ಮತ್ತು ಪಶ್ಚಾತ್ತಾಪ ಮಾಡುತ್ತಿದ್ದರು. ದೇವಪ್ರೇಮದ ಸ್ಥಿತಿ ಹೇಗಿತ್ತೆಂದರೆ, ಪ್ರತಿ ಸಂದರ್ಭದಲ್ಲೂ ಅವರ ಪವಿತ್ರ ನಾಲಿಗೆಯು ದೇವಸ್ಮರಣೆಯಿಂದ (ಝಿಕ್ರ್) ತೇವವಾಗಿರುತ್ತಿತ್ತು.'

ಹಝ್ರತ್ ಸಮ್ರ ಬಿನ್ ಜುಂದಬ್(ರ) ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೇಳಿದರು: 'ನಾಲ್ಕು ಮಾತುಗಳು ಎಲ್ಲ ಮಾತುಗಳಿಗಿಂತ ಶ್ರೇಷ್ಠವಾಗಿವೆ. ಅವುಗಳಲ್ಲಿ ಯಾವುದರಿಂದ ಪ್ರಾರಂಭಿಸಿದರೂ ನಿಮಗೆ ಯಾವುದೇ ನಷ್ಟವಿಲ್ಲ. ಅವುಗಳ ಮೂಲಕ ಆರಂಭಿಸಿದರೆ ಅತ್ಯುತ್ತಮ. ಅವುಗಳೆಂದರೆ: 1. ಸುಬ್‌ಹಾನಲ್ಲಾಹ್ (ಅಲ್ಲಾಹನು ಪವಿತ್ರನು), 2. ಅಲ್‌ಹಮ್ದುಲಿಲ್ಲಾಹ್ (ಎಲ್ಲ ಸ್ತುತಿಗಳು ಅಲ್ಲಾಹನಿಗೆ), 3. ಲಾ ಇಲಾಹ ಇಲ್ಲಲ್ಲಾಹ್ (ಅಲ್ಲಾಹನ ಹೊರತು ಬೇರೆ ದೇವನಿಲ್ಲ), 4. ಅಲ್ಲಾಹು ಅಕ್ಬರ್ (ಅಲ್ಲಾಹನು ಮಹೋನ್ನತನು).' ಆದ್ದರಿಂದ ಈ ಮಾತುಗಳನ್ನು ಯಾವಾಗಲೂ ನೆನಪಿನಲ್ಲಿಡಿ ಮತ್ತು ಕೆಲಸ ಮಾಡುವಾಗ ಇವುಗಳನ್ನು ಪಠಿಸಿದರೆ ಅದರಲ್ಲಿ ಬರ್ಕತ್ ಇರುವುದು.

ಹಝ್ರತ್ ಅಬೂಬಕರ್(ರ) ವರದಿ ಮಾಡುತ್ತಾರೆ: ರಸೂಲುಲ್ಲಾಹ್(ಸ)ರಿಗೆ ಯಾವುದೇ ಸಂತೋಷದ ಸಂಗತಿ ಉಂಟಾಗುವಾಗ ಅವರು ತಕ್ಷಣ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಲು ಸಜ್ದ ಮಾಡುತ್ತಿದ್ದರು.

ಹಝ್ರತ್ ಮುಆಧ್ ಬಿನ್ ಜಬಲ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು: 'ಅಲ್ಲಾಹನ ಸ್ಮರಣೆಗಿಂತ (ಝಿಕ್ರ್) ಮಿಗಿಲಾಗಿ ಅಲ್ಲಾಹನ ಶಿಕ್ಷೆಯಿಂದ ಪಾರು ಮಾಡುವ ಬೇರೆ ಯಾವುದೇ ವಸ್ತುವಿಲ್ಲ.'

ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: 'ಅಲ್ಲಾಹನು ನನ್ನ ಮೇಲೆ ಮಾಡಿದ ಅನುಗ್ರಹಗಳಲ್ಲಿ ಒಂದೇನೆಂದರೆ, ರಸೂಲುಲ್ಲಾಹ್(ಸ) ನನ್ನ ಮನೆಯಲ್ಲಿ, ನನ್ನ ಸರದಿಯ ದಿನ, ನನ್ನ ಎದೆ ಮತ್ತು ಕುತ್ತಿಗೆಯ ನಡುವೆ ತಲೆ ಇಟ್ಟು ನಿಧನರಾದರು. ಅವರ ಮರಣದ ಸಮಯದಲ್ಲಿ ಅಲ್ಲಾಹನು ನನ್ನ ಲಾಲಾರಸ ಮತ್ತು ಅವರ ಲಾಲಾರಸವನ್ನು ಒಂದುಗೂಡಿಸಿದನು. ಅದು ಹೇಗೆಂದರೆ, ಅಬ್ದುರ್ರಹ್ಮಾನ್ ನನ್ನ ಬಳಿಗೆ ಬಂದರು, ಅವರ ಕೈಯಲ್ಲಿ ಮಿಸ್ವಾಕ್ ಇತ್ತು. ನಾನು ರಸೂಲುಲ್ಲಾಹ್(ಸ)ರಿಗೆ ಆಸರೆ ನೀಡಿದ್ದೆ. ಅವರು ಮಿಸ್ವಾಕ್ ಕಡೆಗೆ ನೋಡುತ್ತಿರುವುದನ್ನು ನಾನು ಗಮನಿಸಿದೆ ಮತ್ತು ಅವರಿಗೆ ಮಿಸ್ವಾಕ್ ಇಷ್ಟವೆಂದು ನನಗೆ ಗೊತ್ತಿತ್ತು. 'ನಿಮಗಾಗಿ ಅದನ್ನು ತೆಗೆದುಕೊಳ್ಳಲೇ?' ಎಂದು ನಾನು ಕೇಳಿದೆ. 'ಹಾಂ' ಎಂದು ಅವರು ತಲೆಯಿಂದ ಸನ್ನೆ ಮಾಡಿದರು. ನಾನು ಅದನ್ನು ಅವರಿಗೆ ಕೊಟ್ಟಾಗ ಅದು ಅವರಿಗೆ ಗಟ್ಟಿಯೆನಿಸಿತು. 'ಅದನ್ನು ನಿಮಗಾಗಿ ಮೃದುಗೊಳಿಸಿ ಕೊಡಲೇ?' ಎಂದು ನಾನು ಕೇಳಿದೆ. 'ಹೌದು' ಎಂದು ಅವರು ಸನ್ನೆ ಮಾಡಿದರು. ನಾನು ಅದನ್ನು ಜಗಿದು ಮೃದುಗೊಳಿಸಿದೆ.

ಹಝ್ರತ್ ಪೈಗಂಬರ್(ಸ)ರ ಮುಂದೆ ನೀರಿನ ಪಾತ್ರೆಯಿತ್ತು. ಅವರು ತಮ್ಮ ಕೈಗಳನ್ನು ನೀರಿನಲ್ಲಿ ಅದ್ದಿ ತಮ್ಮ ಮುಖದ ಮೇಲೆ ಸವರುತ್ತಾ, 'ಲಾ ಇಲಾಹ ಇಲ್ಲಲ್ಲಾಹ್, ಖಂಡಿತವಾಗಿಯೂ ಮರಣದ ಸಮಯ ಕಷ್ಟಕರವಾಗಿರುತ್ತದೆ' ಎಂದು ಹೇಳುತ್ತಿದ್ದರು. ಅನಂತರ ಅವರು ತಮ್ಮ ಕೈಯನ್ನು ಎತ್ತಿ, ಅರ್ರಫೀಕುಲ್ ಅಅ್‌ಲಾ' (ಅತ್ಯುನ್ನತ ಸ್ನೇಹಿತನಾದ ಅಲ್ಲಾಹನ ಬಳಿಗೆ) ಎಂದು ಹೇಳುತ್ತಾ ಹೇಳುತ್ತಾ ನಿಧನಗೊಂಡರು ಮತ್ತು ಅವರ ಕೈ ಕೆಳಗೆ ಬಿತ್ತು.'

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಅಲ್ಲಾಹನು ಹಝ್ರತ್ ಪೈಗಂಬರ್(ಸ)ರಿಗೆ ಕೊನೆಯ ಸಮಯದಲ್ಲಿ ಆಯ್ಕೆಯನ್ನು ನೀಡಿದ್ದನು. ಅಂದರೆ ಬೇಕಾದರೆ ಲೋಕದಲ್ಲಿ ಇರಬಹುದು ಅಥವಾ ನನ್ನ ಬಳಿಗೆ ಬರಬಹುದು ಎಂದು ಹೇಳಿದ್ದನು. ಆಗ ಹಝ್ರತ್ ಪೈಗಂಬರ್(ಸ) ಹೀಗೆ ವಿನಂತಿಸಿಕೊಂಡರು: 'ಹೇ ನನ್ನ ಪ್ರಭೂ, ನಾನು ನಿನ್ನ ಬಳಿಗೆ ಬರಲು ಇಷ್ಟಪಡುತ್ತೇನೆ.' ಕೊನೆಯ ಕ್ಷಣದಲ್ಲಿ ಅವರ ಪವಿತ್ರ ಜೀವ ಹೊರಟುಹೋಗುವಾಗ ಅವರ ಕೊನೆಯ ಮಾತು 'ಬಿರ್ರಫೀಕುಲ್ ಅಅ್‌ಲಾ' ಎಂಬುದೇ ಆಗಿತ್ತು. ಅಂದರೆ, ಈಗ ನಾನು ಇಲ್ಲಿ ಉಳಿಯಲು ಬಯಸುವುದಿಲ್ಲ, ನಾನು ನನ್ನ ದೇವನ ಬಳಿಗೆ ಹೋಗಲು ಬಯಸುತ್ತೇನೆ."

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುಮ್ಮಜೀದ್.**

——————————*****——————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِیَ لَهٗ ۚ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 30-01-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon